ತುಂಬಾ ಇಷ್ಟವಾಗಿತ್ತು.

'ನಾನೊಂದು ಮನೆಯನ್ನು ನೋಡಿದ್ದೇನೆ, ಅದು ದುಬಾರಿಯಾದರೂ ಎಲ್ಲಾ ಅನುಕೂಲಗಳು ಇವೆ', ರಿತಿಕ್ ಹೇಳಿದ.

'ಎಲ್ಲಿದೆ?'

'ಹೌಸಿಂಗ್ ಬೋರ್ಡ್ ಕಾಲೊನಿಯಲ್ಲಿ.'

'ರೀ ಸೇಲಿಗಿದೆಯಾ?'

'ಹೌದು'

'ಕನ್ಸಸ್ಟ್ರಕ್ಷನ್ ಹೇಗಿದೆ ಎಂದು ನೋಡಬೇಕಿದೆ. ಹೌಸಿಂಗ್ ಬೋರ್ಡ್ ಮನೆಗಳ ಕನ್ಸಸ್ಟ್ರಕ್ಷನ್ ಮೆಟೀರಿಯಲ್ಸ್ ಉತ್ತಮ ಕ್ವಾಲಿಟಿ ಹೊಂದಿರುವುದಿಲ್ಲವೆಂದು ಹೇಳಲಾಗುತ್ತದೆ'.

'ನಾನಿವತ್ತು ಮಧ್ಯಾಹ್ನ ಶಿವಾನೊಂದಿಗೆ ಹೋಗಿ ನೋಡಿದೆ. ಅವನೇ ಆ ಮನೆಯನ್ನು ಹುಡುಕಿದ್ದಾನೆ. ನೀನು ಸಹ ಬಂದು ನೋಡು.'

'ಬೆಲೆ ಎಷ್ಟು?'

'ತುಂಬಾ ದುಬಾರಿ'

'ಎಷ್ಟಾಗುತ್ತೆ?'

'ಹದಿನಾಲ್ಕು ಲಕ್ಷ'

'ಹದಿನಾಲ್ಕು ಲಕ್ಷ?'

'ಹೌದು, ಅದರ ಮಾಲೀಕ ಇಪ್ಪತ್ತು ಲಕ್ಷಕ್ಕಿಂತ ಕಡಿಮೆಗೆ ಕೊಡಲು ಸಿದ್ಧನಿರಲಿಲ್ಲ. ಆದರೆ ಅವನಿಗೆ ಶಿವಾನ ಕೃಪೆಯಿದೆ, ಅದಕ್ಕೇ ಚೌಕಾಸಿ ಮಾಡಿ ಮಾಡಿ ಹದಿನಾಲ್ಕು ಲಕ್ಷಕ್ಕೆ ಬಂದಿದ್ದಾನೆ.'

'ಸರಿ, ನಾವು ಅವನ ಹಣವನ್ನು ಕಂತುಗಳಲ್ಲಿ ಚುಕ್ತಾ ಮಾಡೋಣ', ನಮ್ಮ ಸಾಮರ್ಥ್ಯಕ್ಕೆ ಅಷ್ಟು ಹಣ ಹೆಚ್ಚಿತ್ತು.

'ಇಲ್ಲ, ಒಂದೇ ಸಲಕ್ಕೆ ಕೊಡಬೇಕಾಗುತ್ತೆ. ಒಂದು ವೇಳೆ ನಿನಗೂ ಮನೆ ಇಷ್ಟವಾದರೆ, ಇದನ್ನೇ ಮಾಡಬೇಕಾಗುತ್ತೆ.'

'ಆದ್ರೆ...'


'ನಮ್ಮ ಎಫ್.ಡಿ. ಕ್ಲೋಸ್ ಮಾಡೋಣ, ಉಳಿದಿದ್ದಕ್ಕೆ ಸಾಲ ಪಡೆಯೋಣ', ರಿತಿಕ್ ಎಲ್ಲವನ್ನೂ ಆಗಲೇ ಯೋಚಿಸಿದಂತಿತ್ತು.

'ಸರಿ, ಮನೆ ನೋಡಲು ಯಾವಾಗ ಹೋಗೋಣ?'

'ನಾಳೆ ಸಂಜೆ ನೀನು ಕಚೇರಿಯಿಂದ ಹೊರಡುತ್ತಲೇ, ಅಲ್ಲಿಂದ ನೇರವಾಗಿ ಹೌಸಿಂಗ್ ಬೋರ್ಡ್ ಕಾಲೊನಿಗೆ ಹೋಗೋಣ'.

'ಆಗಲಿ.' ನಾನು ಸಹ ಆ ಮನೆಯನ್ನು ನೋಡಲು ಉತ್ಸುಕಳಾಗಿದ್ದೆ.

ಮರುದಿನ ಸಂಜೆ, ನಾನು ಕಚೇರಿಯಿಂದ ಹೊರ ಬರುತ್ತಲೇ ಅಲ್ಲಿ ರಿತಿಕ್ ಬೈಕ್ ನಿಲ್ಲಿಸಿ ನನಗಾಗಿ ಕಾಯುತ್ತಿದ್ದ. ನಾವಿಬ್ಬರು ಹೌಸಿಂಗ್ ಬೋರ್ಡ್ ಕಾಲೊನಿಗೆ ಹೋದೆವು. ನಾವು ಕೊಳ್ಳುವ ಮನೆ, ಎರಡನೆಯ ಸಾಲಿನಲ್ಲಿತ್ತು. ಅದು ಹೊರನೋಟಕ್ಕೆ ತುಂಬಾ ವಿಶಾಲವಾಗಿ ಮತ್ತು ಸುಂದರವಾಗಿ ಕಂಡಿತ್ತು. ಆ ಮನೆಯ ಮಾಲೀಕ, ಮನೆಯ ಹೊರಗೇ ಭೇಟಿಯಾದ. ಮಾಲೀಕ ಬೋಳು ತಲೆಯವನಾಗಿದ್ದು, ನಗುಮುಖದ ವ್ಯಕ್ತಿಯಾಗಿದ್ದ. ಅವನ ವಯಸ್ಸು ಐವತ್ತು ಐವತ್ತೈದಿರಬೇಕು.



'ಬನ್ನಿ ಅತ್ತಿಗೆ, ನಮಸ್ಕಾರ' ಅವನು ಮುಗುಳ್ನಗುತ್ತಾ ನನ್ನ ಸ್ವಾಗತ ಮಾಡಿದ. ನಾನು ಓರೆನೋಟದಿಂದ ರಿತಿಕ್‌ನನ್ನು ನೋಡಿದೆ. ಅವನ ಮುಖದಲ್ಲಿ 'ಅತ್ತಿಗೆ' ಶಬ್ದಕ್ಕೆ ಯಾವುದೇ ಪ್ರತಿಕ್ರಿಯೆ ಮೂಡಿರಲಿಲ್ಲ. ನಾನು ಸಹ ಮುಗುಳ್ನಕ್ಕೆ.

'ಮನೆ ನಿಮಗೆ ಇಷ್ಟವಾಗುತ್ತೆ ಅಂತ ನನಗೆ ನಂಬಿಕೆಯಿದೆ', ಮನೆಯ ಮಾಲೀಕ ತನ್ನ ವಿಶ್ವಾಸ ವ್ಯಕ್ತಪಡಿಸಿದ.

'ನೀವೇಕೆ ಈ ಮನೆಯನ್ನು ಮಾರ್ತಿದ್ದೀರ?' ರಿತಿಕ್ ಈ ಮನೆ ಬಗ್ಗೆ ಹೇಳಿದಾಗಲೇ ನನ್ನ ಮನಸ್ಸಿನಲ್ಲಿ ಈ ಬಗ್ಗೆ ಕುತೂಹಲವಿತ್ತು.

'ನಿಮ್ಮ ಮನಸ್ಸಿಗೆ ಈ ಪ್ರಶ್ನೆ ಬರುವುದು ಸಹಜ. ನಿಜ ಹೇಳಬೇಕೆಂದರೆ, ನನ್ನ ಮಗ ಬೆಂಗಳೂರಿನಲ್ಲಿ ವಾಸವಾಗಿದ್ದಾನೆ. ಅಲ್ಲಿ ಅವನೊಂದು ದೊಡ್ಡ ಮನೆಯನ್ನು ನೋಡಿದ್ದಾನೆ. ನಾವು ಅವನೊಂದಿಗಿರಬೇಕೆಂಬುದು ಅವನ ಆಸೆಯಾಗಿದೆ. ನನ್ನ ಹೆಂಡತಿ ಸಹ ಇದನ್ನೇ ಬಯಸುತ್ತಾಳೆ. ಇವತ್ತಿನ ದಿನಗಳಲ್ಲಿ ನಮ್ಮಂಥ ಸರಳ ಸ್ವಭಾವದ ಜನ ಮನೆಯನ್ನು ಬಾಡಿಗೆಗೆ ಕೊಡುವ ಧೈರ್ಯ ಮಾಡಲ್ಲ. ಒಂದು ವೇಳೆ ಬಲವಾದ ಬಾಡಿಗೆದಾರ ಸಿಕ್ಕರೆ, ಮನೆ ಕೈತಪ್ಪಿಯೇ ಹೋಗುತ್ತದೆ. ಮನೆಯನ್ನು ಖಾಲಿ ಬಿಡೋಣವೆಂದರೆ, ಭೂ ಮಾಫಿಯಾದಿಂದ ಪಾರಾಗೋದು ಕಷ್ಟ. ಅದಕ್ಕೇ ಮನೆಯನ್ನು ಮಾರಲು ನಿರ್ಧರಿಸಿದ್ದೇನೆ.'

'ನಿಮ್ಮ ಹೆಂಡತಿ ಎಲ್ಲಿದ್ದಾರೆ?' ಈ ಪ್ರಶ್ನೆಯನ್ನು ಕೇಳುವ ಅಗತ್ಯವಿರಲಿಲ್ಲ.

'ಬೆಂಗಳೂರಿನಲ್ಲಿ ಮಗನ ಬಳಿ ಇದ್ದಾಳೆ. ಅವಳೂ ನನ್ನ ಜೊತೆಯಲ್ಲಿ ಬರುವವಳಿದ್ದಳು, ನಾನೇ ಬೇಡವೆಂದೆ. ಬಿಕಾಸ್ ಯೂ ನೋ, ನನ್ನ ಹೆಂಡ್ತಿ ತುಂಬಾ ಕಾಳಜಿ ವಹಿಸಿ ಈ ಮನೆಯನ್ನು ತನಗಿಷ್ಟ ಬಂದಂತೆ ಮಾಡಿಫೈಡ್ ಮಾಡಿಸಿದ್ದಳು. ಈಗ ತನ್ನ ಕಣ್ಣೆದುರೇ, ಈ ಮನೆ ಮಾರಾಟವಾಗುವುದನ್ನು ನೋಡಿದಾಗ ಅವಳಿಗೆ ತುಂಬಾ ದುಃಖವಾಗುತ್ತದೆ' ಎಂದ ಮನೆ ಮಾಲೀಕ.

'ನೀವು ನಿಜವನ್ನೇ ಹೇಳಿದಿರಿ', ನಾನು ಮಾಲೀಕನ ತರ್ಕವನ್ನು ಸಮರ್ಥಿಸಿದೆ. ಈ ನಡುವೆ ಅವನೊಂದು ಕೋಣೆಯನ್ನು ತೋರಿಸುತ್ತಾ ಹೋಗುತ್ತಿದ್ದ. ಆ ಮನೆ ಡ್ಯುಪ್ಲೆಕ್ಸ್ ಶೈಲಿಯಲ್ಲಿದ್ದು ಒಂದು ಭವ್ಯ ಬಂಗ್ಲೆಯಾಗಿ ಶೋಭಿಸುತ್ತಿತ್ತು. ಮೂರು ರೂಮುಗಳ ಆ ಮನೆಯಲ್ಲಿ ಒಂದು ವಿಶಾಲ ಅಡುಗೆ ಮನೆ, ಒಂದು ಸ್ಟೋರ್ ರೂಮ್, ಪೂಜಾ ಮನೆ, ಸ್ಟಡಿ ರೂಮ್ ಎಲ್ಲವೂ ಇದ್ದವು. ಆ ಮನೆಯನ್ನು ನೋಡಿ, ನಾವೇಕೆ ಇಷ್ಟು ದೊಡ್ಡ ಮನೆಯನ್ನು ಖರೀದಿಸುತ್ತಿದ್ದೇವೆ ಎಂದು ಆಶ್ಚರ್ಯವಾಯಿತು. ಇದನ್ನು ರಿತಿಕ್‌ನಲ್ಲಿ ಕೇಳಬೇಕೆಂದಿದ್ದೆ, ಆದರೆ ಮನೆಯ ಮಾಲೀಕನೆದುರು ಕೇಳಲಿಲ್ಲ.

'ನಿಮಗೆ ಮನೆ ಇಷ್ಟವಾಯ್ತು?' ಮಾಲೀಕ ಕೇಳಿದ.

'ತುಂಬಾ ಸುಂದರವಾಗಿದೆ, ತುಂಬಾ ಭವ್ಯವಾಗಿದೆ'

'ನಿಮಗೆ ಮನೆ ಇಷ್ಟವಾಗುತ್ತೆ ಅಂತ ನನಗೆ ಗೊತ್ತಿತ್ತು. ಅತ್ತಿಗೆಯವರು ಈ ಮನೆಯನ್ನು ಕೊಂಡ ನಂತರ ಮೊದಲ ಬಾರಿಗೆ ನೋಡಿದರೂ, ಅವರು ಇದನ್ನು ಇಷ್ಟಪಡದೆ ಇರುವುದಿಲ್ಲವೆಂದು ನಾನು ನಿನ್ನೆ ರಿತಿಕ್‌ಗೆ ಹೇಳಿದ್ದೆ. ನೋಡಿ, ಈ ಮನೆಗೆ ಒಂದು ಮನೆಯ ರೂಪ ಕೊಡುವುದರಲ್ಲಿ ಒಂದು ಹೆಣ್ಣಿನ ಇಷ್ಟ ಸಹ ಇದೆ, ಅಂದ್ರೆ ನನ್ನ ಹೆಂಡತಿಯ ಇಷ್ಟ...' ಮಾಲೀಕ ಹೇಳಿದ.

'ಸರಿ, ಮುಂದಿನ ವಾರ ನಾವು ಇದರ ರಿಜಿಸ್ಟ್ರೇಷನ್ ಮಾಡಿಸಿಕೊಳ್ತೀವಿ' ಎಂದು ರಿತಿಕ್ ಆಶ್ವಾಸನೆ ಕೊಟ್ಟ.

'ಅದಕ್ಕೂ ಮೊದ್ಲು ಆಗದೇ?' ಮಾಲೀಕ ಕೇಳಿದ.

'ಇಲ್ಲ. ಲೋನ್ ತೆಗೆದುಕೊಳ್ಳಲು ಸಮಯ ಹಿಡಿಯುತ್ತೆ. ಬ್ಯಾಂಕ್ ಮ್ಯಾನೇಜರ್ ನನಗೆ ಪರಿಚಯವಿದ್ದಾರೆ, ಅದಕ್ಕೇ ಬೇಗ ಕೆಲಸವಾಗುತ್ತೆ. ನೀವು ರಿಜಿಸ್ಟರ್ ಕಾಪಿ ತಂದಿದ್ದೀರಲ್ಲ?' ರಿತಿಕ್ ಕೇಳಿದ.

'ತಂದಿದ್ದೇನೆ, ತಗೊಳ್ಳಿ', ಮಾಲೀಕ ರಿಜಿಸ್ಟ್ರೇಷನ್ನಿನ ಜೆರಾಕ್ಸ್ ಪ್ರತಿಯನ್ನು ರಿತಿಕ್‌ನ ಕೈಗೆ ಕೊಟ್ಟ.

'ನೀವು ಶಿವಾನ ಮಿತ್ರರು, ಅದಕ್ಕೇ ನಾನು ನಿಮ್ಮನ್ನು ನಂಬುತ್ತೇನೆ!'

'ಖಂಡಿತ' ಎಂದ ರಿತಿಕ್. ನಂತರ ನಾವಿಬ್ಬರು ಮಾಲೀಕನಿಂದ ಬೀಳ್ಕೊಂಡು ಮನೆಗೆ ಮರಳಿ ಬಂದೆವು. ಮನೆಗೆ ಬಂದ ಕೂಡಲೇ ರಿತಿಕ್‌ನನ್ನು ಕೇಳಿದೆ, 'ನಾವು ಅಷ್ಟು ದೊಡ್ಡ ಮನೆಯನ್ನು ಏಕೆ ಕೊಂಡುಕೊಳ್ತಿದ್ದೇವೆ?'

'ಏಕೆ? ದೊಡ್ಡ ಮನೆ ಕೊಳ್ಳುವುದರಿಂದ ಏನು ತೊಂದ್ರೆ?' ರಿತಿಕ್ ನನ್ನನ್ನೇ ಪ್ರಶ್ನಿಸಿದ.

'ತೊಂದ್ರೆ ಏನಿಲ್ಲ. ಆದ್ರೆ ನಾವು ಒಂದೇ ಬೆಡ್‌ರೂಮಿರುವ ಮನೆಯಲ್ಲೂ ಇರಬಲ್ಲೆವು. ಮೂರುಮೂರು ಬೆಡ್‌ರೂಮುಗಳ ಮನೆಯನ್ನೇಕೆ ಕೊಳ್ಳಬೇಕು... ದುಬಾರಿ ಬೇರೆ', ನನ್ನ ಅಭಿಪ್ರಾಯವನ್ನು ತಿಳಿಸಿದೆ.

'ಹೆಂಗಸರೇ ಹೀಗೆ. ಆಭರಣಗಳು, ಬಟ್ಟೆಗಳು, ಕಾಸ್ಮೆಟಿಕ್‌ಗಳನ್ನು ಕೊಳ್ಳುವಾಗ ಅಗ್ಗ ದುಬಾರಿ ಎಂದು ನೋಡಲ್ಲ; ಆದ್ರೆ ಸ್ಥಿರಸಂಪತ್ತನ್ನು ಕೊಳ್ಳುವಾಗ ಮೀನಾಮೇಷ ಮಾಡ್ತೀರ', ರಿತಿಕ್ ರೇಗಿದ.

ನನಗೂ ಆಶ್ಚರ್ಯವಾಯಿತು, ಏಕೆಂದರೆ ನನಗೆ ಆಭರಣಗಳು, ಬಟ್ಟೆಗಳು ಅಥವಾ ಕಾಸ್ಮೆಟಿಕ್‌ಗಳನ್ನು ಕೊಳ್ಳುವ ಬಗ್ಗೆ ಆಸಕ್ತಿ ಇರಲಿಲ್ಲ.

'ನಾನು ಹೀಗೆ ಹೇಳಲಿಲ್ಲ, ನಾನು ಸುಮ್ಮನೆ ಕೇಳಿದೆ'. ನಾನೇಕೆ ರೇಗಿದೆನೋ, ತಿಳಿಯದು. ಬಹುಶಃ ಮನೆಯ ವಿಷಯವಾಗಿದ್ದು, ನನ್ನೊಳಗೆ ಕೂತಿದ್ದ ಗೃಹಿಣಿ ಸಹ ಅಂಥದ್ದೇ ವಿಶಾಲ ಮನೆಯನ್ನು ಪಡೆಯಲು ಬಯಸುತ್ತಿದ್ದಳು ಅಥವಾ ನಾನು ರಿತಿಕ್‌ನ ಸಿಟ್ಟಿಗೆ ಒಬ್ಬ ಹೆಂಡತಿಯಂತೆ ಹೆದರಲಾರಂಭಿಸಿದ್ದೆ. ನಂತರ ಮನೆಯ ಆಕಾರದ ಬಗ್ಗೆ ನಮ್ಮ ನಡುವೆ ಯಾವುದೇ ಚರ್ಚೆ ನಡೆಯಲಿಲ್ಲ. ಎಲ್ಲಿಂದ, ಎಷ್ಟು ಹಣ ಸಿಗಬಹುದು, ಎಷ್ಟು ಹಣ ಒಟ್ಟು ಹಾಕಬಹುದು ಎಂದು ನಾವು ನಮ್ಮ ಹಣದ ಲೆಕ್ಕ ಹಾಕಲು ಆರಂಭಿಸಿದೆವು.

ನಾವು ನಮ್ಮನಮ್ಮ ಎಫ್.ಡಿ.ಗಳನ್ನು ರದ್ದುಪಡಿಸಿ ಹಣವನ್ನು ತೆಗೆದುಕೊಂಡೆವು. ಲೋನ್ ಬಗ್ಗೆ ವಿಚಾರಿಸಿದೆವು. ಸಮಯವನ್ನು ಕಳೆಯದೆ ಆ ಮನೆಯನ್ನು ಜಂಟಿ ಹೆಸರಿನಲ್ಲಿ ನೋಂದಣಿ ಮಾಡಿಸಿಕೊಂಡೆವು. ಆ ಮನೆಗೆ ನಾವಿಬ್ಬರು